**ವಿಷಯ:- ಮೈಸೂರು ಲ್ಯಾಂಪ್ ವರ್ಕ್ಸ್ ಸಂಸ್ಥೆಯಲ್ಲಿ ದಿನಗೂಲಿ ನೌಕರರಾಗಿ ಕೆಲಸ ನಿರ್ವಹಿಸುತ್ತಿರುವರ ಸಂಖ್ಯೆ.**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1340 (1843)

ಶ್ರೀ ರಾಮಲಿಂಗ ರೆಡ್ಡಿ (ಜಯನಗರ) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜನವರಿ 1991 ರಿಂದ ಡಿಸೆಂಬರ್ 1991ರ ಅವಧಿಯಲ್ಲಿ ಮೈಸೂರು ಲ್ಯಾಂಪ್ ವರ್ಕ್ಸ್ ಸಂಸ್ಥೆಯಲ್ಲಿ ದಿನಗೂಲಿ ನೌಕರರಾಗಿ ಕಾರ್ಯನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು ;

ಆ) ಅವರುಗಳಿಗೆ ನೀಡಿರುವ ದಿನಗೂಲಿ ಎಷ್ಟು ;

ಇ) ಯಾವ ಅರ್ಹತೆ ಆಧಾರದ ಮೇಲೆ ಇವರನ್ನು ನೇಮಕ ಮಾಡಿಕೊಳ್ಳಲಾಗಿದೆ ;

ಈ) ಇವರ ಹೆಸರುಗಳನ್ನು ಉದ್ಯೋಗ ವಿನಿಮಯ ಕೇಂದ್ರದಿಂದ ತರಿಸಿಕೊಳ್ಳಲಾಗಿದೆಯೇ ?

ಶ್ರೀಮತಿ ಮನೋರಮ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಇಬ್ಬರು.

ಆ) ರೂ. 17,272-00

ಇ) ಕಳೆದ 10 ವರ್ಷಗಳ ಹಿಂದೆ ಸಂಸ್ಥೆಯ ಉಪಹಾರ ಗೃಹದ ದವಸ ಧಾನ್ಯ ಸ್ವಚ್ಛ ಮಾಡುವ ಕಾರ್ಯಕ್ಕೆ ಈ ಇಬ್ಬರನ್ನು ನೇಮಕ ಮಾಡಿಕೊಂಡಿರುವುದರಿಂದ, ಅವರ ಯಾವುದೇ ನಿರ್ದಿಷ್ಟವಾದ ಅರ್ಹತೆಯನ್ನು ಪರಿಗಣಿಸಿರುವುದಿಲ್ಲ.

ಈ) ಇಲ್ಲ.

**ವಿಷಯ:-ರಾಜ್ಯ ಸ್ವಾಮ್ಯದ ಕೈಗಾರಿಕೆಗಳಲ್ಲಿ ಆಗಿರುವ ನಷ್ಟದ ಪ್ರಮಾಣ.**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1343 (1852)

ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯ ಸ್ವಾಮ್ಯದ ಕರ್ನಾಟಕ ಸಾಬೂನು ಕಾರ್ಖಾನೆಯಲ್ಲಿ ಈವರೆಗೆ ಆಗಿರುವ ನಷ್ಟದ ಪ್ರಮಾಣವೆಷ್ಟು?

ಆ) ಈ ನಷ್ಟಕ್ಕೆ ಕಾರಣರಾಗಿರುವ ಅಧಿಕಾರಿಗಳು ಯಾರೆಂದು ವಿಧಾನ ಮಂಡಲದ ಸಾರ್ವಜನಿಕ ಉದ್ಯಮ ಸಮಿತಿ ತನ್ನ ವರದಿಯಲ್ಲಿ ಗುರುತಿಸುವುದು ನಿಜವೇ :

ಇ) ತಪ್ಪಿತಸ್ಥ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡಿರುವ ಇಲಾಖಾ ಹಾಗೂ ಕಾನೂನು ಕ್ರಮಗಳೇನು?

ಶ್ರೀಮತಿ ಮನೋರಮಾ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ರೂ. 8,140.33 ಲಕ್ಷಗಳು (ಜನವರಿ 1992ರ ಅಂತ್ಯದವರೆಗೆ )

ಆ) ಸದರಿ ವರದಿಯಲ್ಲಿ ಸಮಿತಿಯು ಅಭಿಪ್ರಾಯ ಪಟ್ಟಿರುವಂತೆ ಈ ಕಂಪನಿಯು ಅನುಭವಿಸುತ್ತಿರುವ ನಷ್ಟಕ್ಕೆ ಮುಖ್ಯ ಕಾರಣ "ಸೋಪ್ ಎಕ್ಸ್‌ಟೆನಷನ್ ಪ್ರಾಜೆಕ್ಟ್" ಅನುಷ್ಠಾನದಲ್ಲಿ ಉಂಟಾದ ಲಕ್ರಮಗಳು ಈ ಬಗ್ಗೆ ಆಗಿನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ವಿ. ಜಯಪ್ಪ , ಆಗಿನ ಟೆಕ್ನಿಕಲ್ ಅಧಿಕಾರಿಗಳನ್ನು ಇದಕ್ಕೆ ಜವಬ್ದಾರರು ಎಂಬುದಾಗಿ ಸಮಿತಿ ಹೇಳಿದೆ.

ಇ) ಈ ಬಗ್ಗೆ ತನಿಖೆ ಮಾಡಿ ವರದಿ ನೀಡಲು ಜಸ್ಟೀಸ್ ಮಹೇಂದ್ರ ಕಮೀಷನ್ ಆಫ್ ಎನ್‌ಕ್ವೈರಿಯನ್ನು ಸರ್ಕಾರವು ನೇಮಿಸಿದೆ. ಈ ಕಮಿಷನ್ ಈಗ ತನಿಖೆ ಕೆಲಸವನ್ನು ಮಾಡುತ್ತಿದೆ.